Doc-361
T.P-2

(1).

51st Year of Publication ★ SATYAVADI Daily, MYSORE 4

Reg No B G 155 ಶ್ರೀ 26-8-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

ಹಬ್ಬಕ್ಕಾಗಿ
ಆಕರ್ಷಣೀಯ ಬಣ್ಣಗಳ ತರಹಾವರಿ ಸೀರೆಗಳೂ, ಬಟ್ಟೆಗಳೂ ಸರಿಯಾದ ಬೆಲೆಗೆ ದೊರೆಯುತ್ತವೆ.
ಪರಶುರಾಂ ಹಾಲ್
ಗಯಾಜೀರಾವ್ ರೋಡ್ ಮೈಸೂರು

ಸ್ಥಾಪಕರು : ಅನುಮತಿಸಿರತ್ನೇಸಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಪೂ. ಎಸ್. ಕೃಷ್ಣರಾವ್ [2ಪೈಸೆ

ಏ ಐ ಆರ್ ನವರ ಉಪವಾಸ ಮುಷ್ಕರ

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕೆನ್ನಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪ್ತೇರಾ ಟಾಕೇಸಿನವರು, ಪದ್ಮಭೂಷಣ ನೇ॥ದಾನಿ ಡಾ॥ ಎಂ.ಸಿ ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಪೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಲೇಕಾಗಿ ವಿನಂತಿಸಿ, ಈಡೇರುವೆವೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ‘ಸತ್ಯವಾದಿ’
ಚಾಮರಾಜಪುರಂ, ಮೈಸೂರು 4.

ಪೌರಸಭೆ

ಮೈಸೂರು— ಈ ನೂತನ ಪುರಸಭಾಧಿವೇಶನವು ತಾ ॥ 31 ಶನಿವಾರ ಮಧ್ಯಾಹ್ನ 4 ಗಂಟೆಗೆ ನಡೆಯುವುದು.

ಬಂದೂಕ ಕಾರ್ಖಾನೆ ಪತ್ತೆ

ಮಾಂಘೀರ್ — ಸೊಕಾರಪುರದಲ್ಲಿ ಒಂದು ಭೂಗರ್ಭದಲ್ಲಿನ ರಹಸ್ಯ ಬಂದೂಕ ಕಾರ್ಖಾನೆಯನ್ನು ಪೋಲೀಸರು ಪತ್ತೆ ಮಾಡಿರುವರು.

ಸೇತುವೆ ಉದ್ಘಾಟನೆ

ಮೈಸೂರು— ಹಲ್ಲಹಳ್ಳಿಮತ್ತು ರಾಂಪುರ ಗ್ರಾಮಗಳ ಮಧ್ಯೆ ಕಬಿನಿನದಿ ಮೇಲಿನ ರೂ: 8:63 ಲಕ್ಷದ ಸೇತುವೆಯನ್ನು ಕಾಂಗಾರಿ ಮಂತ್ರಿ ಶ್ರೀ ಲಕ್ಕಪ್ಪನವರು ನಿನ್ನೆ ಉದ್ಘಾಟಿಸಿದರು.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

19-8-1968

ಮೈಸೂರು ಕೆ. ಆರ್. ಆಸ್ಪತ್ರೆ ಸೈಕಲ್ ಸ್ಟ್ಯಾಂಡ್ ಹರಾಜು ಮಾರಾಟ 1 ನೇ ಅಕ್ಟೋಬರ್ 1968 ರಿಂದ 30-9-1969 ರ ಅವಧಿ ವರಿಗೆ

1-10-1968 ರಿಂದ 30-9-1969 ರ ಅವಧಿಯವರಿಗೆ ಮೈಸೂರಿನಲ್ಲಿರುವ ಕೆ. ಆರ್. ಆಸ್ಪತ್ರೆಯ ಮೇಸ್ತ್ರಿಯವರಿಂದ ಆಸ್ಪತ್ರೆ ಪ್ರದೇಶದಲ್ಲಿ 23-9-1968 ರಂದು ಬೆಳಿಗ್ಗೆ 10 ಘಂಟೆಗೆ ಮೈಸೂರಿನಲ್ಲಿರುವ ಕೃಷ್ಣರಾಜೇಂದ್ರ ಆಸ್ಪತ್ರೆ ಸೈಕಲ್ ಸ್ಟ್ಯಾಂಡ್‌ಗಳನ್ನು ಟೋಟ್ ಪೇಷಂಟ್, ಕಣ್ಣಾಸ್ಪತ್ರೆ ಬ್ಲಾಕ್ ಹತ್ತಿರ ಮತ್ತು ಹೊಸ ಸರ್ಜಿಕಲ್ ಬ್ಲಾಕ್ ಹತ್ತಿರ ಬಿಡುವ ವಾಹನಗಳಮೇಲೆ ಶುಲ್ಕ ವಸೂಲಿ ಮಾಡಲು ಹರಾಜು ಪಾಕಾಟ್ ಮಾಡುವುದಾಗಿ ಈ ಮೂಲಕ ತಿಳಿಸಿದೆ. ಹರಾಜಿನಲ್ಲಿ ಭಾಗವಹಿಸುವ ಅಪೇಕ್ಷೆಯುಳ್ಳವರು ಸಕಾಲದಲ್ಲಿ ಹಾಜರಾಗಬೇಕೆಂದು ಕೋರಲಾಗಿದೆ. ಆಸ್ಪತ್ರೆಯ ಕೆಲಸದ ವೇಳೆಗಳಲ್ಲಿ ಕೆ. ಆರ್. ಆಸ್ಪತ್ರೆಯ ಡೀನ್‌ರವರ ಕಛೇರಿಯಲ್ಲಿ ಇತರ ವಿವರಗಳನ್ನು ಪಡೆಯಬಹುದು.

ಸಹಿ/ಹೆಚ್ ವಿ. ಕೃಷ್ಣಮೂರ್ತಿ,
ಕಾರ್ಯದರ್ಶಿ.

PID 1235/68

ವಿವಾಹ ಸಮಸ್ಯೆ

ಜಯಪುರ— ರಾಜಸ್ಥಾನದ ಮಹೇಶ್ವರೀ ಜನಾಂಗದಲ್ಲಿ ಹುಡುಗರು ಹುಡುಗಿಯರ ಎರಡರಷ್ಟಿದ್ದು, ಅವರ ವಿವಾಹ ಒಂದು ಸಮಸ್ಯೆಯಾಗಿ ಪರಿಣಮಿಸಿದೆ.

★

ದಂಪತಿ ಉಪವಾಸಗಳು

ಕಡಪ— ಪುಲಿವೆಂಡಾ ನಾಲಾ ಕಾರ್ಯ ನೆರವೇರುವುದು ತಡವಾಗುತ್ತಿರುವುದನ್ನು ಪ್ರತಿಭಟಿಸಿ ಅಲ್ಲಿ ಉಪವಾಸ ಮಾಡುತ್ತಿರುವ ಶ್ರೀ ರಾಮಕೃಷ್ಣ ರೆಡ್ಡಿ ಮತ್ತು ಅತನ ಪತ್ನಿ ಸೋಮಕ್ಕನವರನ್ನು ಪೋಲೀಸರು ಅವರ ಶಿಬಿರದಿಂದ ಕರ್ನೂಲು ಜನರಲ್ ಆಸ್ಪತ್ರೆಗೆ ಸಾಗಿಸಿದರು — ಪುಲಿವೆಂಡ್ಲಾದಲ್ಲಿ ಸಶಸ್ತ್ರ ಪೋಲೀಸರೊಡನೆ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟ್ ಮತ್ತಿತರ ಪೋಲೀಸು ಅಧಿಕಾರಿಗಳೂ ಹಾಜರಿರುವರು — ಸೆಕ್ಷನ್ 144 ಜಾರಿಮಾಡಲಾಗಿದೆ.

★

ಡಾ ॥ ಮೋದಿಯವರ ಕಾರ್ಯಕ್ರಮ

ಹಾವೇರಿ— ಪದ್ಮಭೂಷಣ ಡಾ ॥ ಮೋದಿಯವರು ಬೆಂಗಳೂರು ಜಿಲ್ಲೆಯ ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರದಲ್ಲಿ ಸೆಪ್ಟಂಬರ್ 2, ತುಮಕೂರಿನಲ್ಲಿ 3, ಚನ್ನಗಿರಿ, ರಾಮನಗರ, ಚನ್ನಪಟ್ಟಣ, ನಿಡಘಟ್ಟದಲ್ಲಿ 3 ರಂದು ಉಚಿತ ನೇತ್ರಪರೀಕ್ಷೆ ನಡೆಸುವರು.

★

ಅನ್ನಸತ್ಯಾಗ್ರಹ

ನಂದಿಹಳ್ಳಿ— ತಮ್ಮ ಸೇವೆನಿಯಮ ಮತ್ತಿತರ ವಿಷಯಗಳನ್ನು ಪರಿಪಡಿಸಲು ಒತ್ತಾಯ ಮಾಡುವಪಕ್ಕಾಗಿ ಏ ಐ ಆರ್ ನೌಕರರ ಯೂನಿಯನ್ನಿನವರು 48 ಗಂಟೆ ಅನ್ನಸತ್ಯಾಗ್ರಹವನ್ನು ನಿನ್ನೆ ಪ್ರಾರಂಭಿಸಿದರು.

★

ಕ್ಷಾಮಪೀಡಿತ ಭಾಗ

ಬೆಂಗಳೂರು— ಚನ್ನಪಟ್ಟಣ ತಾಲ್ಲೂಕು ಕ್ಷಾಮಪೀಡಿತ ಪ್ರದೇಶವೆಂದು ಸಾರಲು ಇಲ್ಲಿ ನಡೆದ ತಾಲ್ಲೂಕು ರಾಜಕೀಯ ಸಮ್ಮೇಳನ ಸಕಾರವನ್ನು ಒತ್ತಾಯ ಮಾಡಿದೆ — ಭೂಕಂದಾಯ ವಜಾ ಆಗಬೇಕೆಂದೂ ಹೇಳಲಾಯಿತು — ಬೆಂಗಳೂರಿನಲ್ಲಿ ಸೆಪ್ಟಂಬರ್ 2 ರಂದು ಪ್ರಾರಂಭವಾಗುವ ಶಾಸನಸಭಾ ಕಾಲದಲ್ಲಿ ನಡೆಸಲು ಯೋಜಿಸಿರುವ ಪ್ರದರ್ಶನದಲ್ಲಿ ರೈತರು ಭಾಗವಹಿಸುವಂತೆ ಮನವಿಮಾಡಲಾಯು

●

ಮಹಾ ಘಟಿಗಾರ

ಬೆನಾರಿಸ್— ಕಾಶೀ ವಿಶ್ವವಿದ್ಯಾಲಯದಲ್ಲಿನ ಸೈನ್ಸ್ ಪೋಸ್ಟ್ ಗ್ರಾಜುಯೇಟ್ ಕೋರ್ಸಿಗೆ ಸೇರಲಿಚ್ಛಿಸಿದ್ದ 20 ವರ್ಷದ ತ್ರಿಪಠಿಗೆ ಪ್ರವೇಶಕ್ಕೆ ಅವಶ್ಯವಿದ್ದ ನಂಬರುಗಳಿಗಿಂತ 5 ನಂಬರು ಕಡಮೆ ಇದ್ದುದರಿಂದ ತಿರಸ್ಕರಿಸಲ್ಪಟ್ಟನು — ಆದರೆ ಕ್ರೀಡಾಪಟುಗಳಿಗೆ 10 ನಂಬರು ಕಡಮೆಯಿದ್ದರೂ ಅವಕಾಶವಿರುವುದೆಂದು ತಿಳಿದು, ತಾನು ಈಜುಗಾರನೆಂಬ ಸರ್ಟಿಫಿಕೇಟು ತೋರಿಸಿದರೂ ಅಧಿಕಾರಿಗಳಿಗೆ ತೃಪ್ತಿಯಾಗದಿರಲು ತುಂಬು ಪ್ರವಾಹದ ಗಂಗಾನದಿಯನ್ನು ಈಜಿ ತಾನು ಸಾಹಸಿ ಕ್ರೀಡಾಪಟು ಎಂಬುದನ್ನು ಪ್ರದರ್ಶಿಸಿ, ಪ್ರವೇಶವನ್ನು ಪಡೆದನು.

★

ದೇವಕೀ ಗತಿ

ಹೈದರಾಬಾದು— ರಾಜ್ಯದಲ್ಲಿ ಒಗಿರುವ ತೀವ್ರ ಅನಾವೃಷ್ಟಿಯಿಂದ ಪಾರಾಗಲು ಶಿವದೇವಾಲಯಗಳಲ್ಲಿ ಘಟಾಭಿಷೇಕವನ್ನೂ, ಶಕ್ತಿದೇವಾಲಯಗಳಲ್ಲಿ ಕುಂಕುಮಾರ್ಚನೆಯನ್ನೂ, ವಿಷ್ಣುದೇವಾಲಯದಲ್ಲಿ ವಿರಾಟಪರ್ವ ಪಾರಾಯಣವನ್ನೂ ನಡೆಸಲು ತಾವು ಸೂಚಿಸಿರುವುದಾಗಿ ದೇವಸ್ಥಾನಗಳ ಮಂತ್ರಿ ಶ್ರೀ ರಾಮಲಿಂಗರಾಜು ಹೇಳಿಕುವರು.

ಚಿಕ್ಕ ವಯಸ್ಸಿನ ತಾಯಂದಿರು

ಸ್ವಿಟ್ಜರ್ಲ್ಯಾಂಡಿನ ಜರ್ಮನಿಯಲ್ಲಿನ ಕೇಂದ್ರ ಅಂಕಿಅಂಶ ಕಚೇರಿಯ ವರದಿಯಂತೆ, 1966 ರಲ್ಲಿ 13 ವರ್ಷದ 9 ಹುಡುಗಿಯರು ತಾಯಂದಿರಾಗಿದ್ದರೆಂದೂ, 20 ವರ್ಷ ಕೆಳಗಿನ ಹುಡುಗಿಯರಿಗೆ ಹುಟ್ಟಿದ ಐದು ಮಕ್ಕಳಲ್ಲಿ ಒಂದು ನ್ಯಾಯಬಾಹಿರವಾದ ವೆಂದೂ ತಿಳಿಯಬರುತ್ತದೆ. 20 ವರ್ಷ ಕೆಳಗಿನ ಹುಡುಗಿಯರಲ್ಲಿ ಆದ ನ್ಯಾಯ ಬಾಹಿರ ಮಕ್ಕಳ ಜನನ 17556 ಎಂದೂ ಪ್ರಕಟವಾಗಿದೆ.

ಸೀರೆಗೆ ಮಾನ್ಯತೆ

ಪಳಿಜಿ ಹೈ ಸ್ಕೂಲಿನಲ್ಲಿ ಸೀರೆ ಉಟ್ಟು ಬಂದಿದ್ದ ಹುಡುಗಿಯನ್ನು ಹೊರಗೆ ಕಳುಹಿಸಲಾಗಿತ್ತು. ಸೀರೆ ಉಟ್ಟು ಸ್ಕೂಲಿಗೆ ಬರುವದಕ್ಕೆ ಆಡಳಿತ ವರ್ಗದ ಅನುಮತಿ ಇರಲಿಲ್ಲ. ಹುಡುಗಿಯ ಪೋಷಕರು ಸರಕಾರದ ವಿದ್ಯಾ ಮಂತ್ರಿಗಳಲ್ಲಿ ಮನವಿ ಮಾಡಿದರು. ಸ್ಕೂಲಿನ ಸಮಿತಿಯ ಬಣ್ಣದ ಸೀರೆ ಉಟ್ಟು ಬರಬಹುದೆಂಬ ಪ್ರಕಟಣೆಯನ್ನು ಹೊರಡಿಸುವಂತೆ ವಿದ್ಯಾಮಂತ್ರಿಗಳು ಆಜ್ಞೆ ಮಾಡಿದರು.

ಹೀಗಾಗುತ್ತದೆಯೆ !

ನಿಲಿಯಗಟ್ಲಿ ಜನರು ಹೊಟ್ಟೆಗಿಲ್ಲದೆ ಸಾಯುತ್ತಾರೆ ಮತ್ತು ಕ್ಷಿಪ್ರದಲ್ಲೇ, ಎಂದು ಅಮೇರಿಕಾದ ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾನಿಲಯದ ಪ್ರಾಣಿತಾಸ್ತ್ರಜ್ಞ ಡಾ॥ ಪಾಲ್ ಎಹರಲಿಕ್ ಹೇಳಿದ್ದಾರೆ — 1970 ರ ಮಧ್ಯಜಲ್ಲಿ ವಿಶ್ವದಲ್ಲಿ ಕ್ಷಾಮಕಾಲವಾಗಿರುವದೆಂದೂ ಭವಿಷ್ಯ ನುಡಿಯಲಾಗಿದೆ.

ಮನೆಗಳನ್ನು ಗುರ್ತಿಸಲು ಪ್ರಾಣಿಗಳ ಚಿತ್ರಗಳು

ಮ್ಯೂನಿಚ್ (ಜರ್ಮನಿ)— ಜರ್ಮನಿಯ ಮ್ಯೂನಿಚ್ ನಗರದ ಮಕ್ಕಳಿಗೆ ಇನ್ನು ಮುಂದೆ ತಮ್ಮ ಮನೆಗಳನ್ನು ನಿರಾತಂಕವಾಗಿ ಗುರುತಿಸಬಹುದು, ಮನೆಯ ನಂಬರಿನ ಪಕ್ಕದಲ್ಲಿಯೆ ಪ್ರಾಣಿಗಳ ಗುರುತು ಅಂಟಿಸಲಾಗುವುದರಿಂದ ತಮ್ಮ ಮನೆಗಳನ್ನು ಗುರುತಿಸಲು ಅಶಕ್ಯರಾದ ಮಕ್ಕಳಿಗೆ ಈ ಕ್ರಮ ಸಹಕಾರಿಯಾಗುತ್ತದೆ.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

---

lity Printing — Neat Binding

Lakshminarasimha Press

Sivarampet, Mysore

ಅಶೋಕ ಏಜೆನ್ಸೀಸ್

ಲಾಸ್ಯಡ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಅಯುರ್ವೇದ ಔಷಧಗಳನ್ನು ಸಿಗುವಲ್ಲಿ ದೊರೆಯುತ್ತವೆ

ಪುಡ್‌ಲಾಂಡ್ ಜನವರಿಯ 3 ನೇ ವಾರ

— ಮನಮೋಹಕ ಹಿಂದಿ ಚಿತ್ರ —

— ಫರ್ಸ್ —

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾದವರು.

ಸಂಗೀತ —

ಲಕ್ಷ್ಮೀಕಾಂತ್ ಪ್ಯಾರೇಲಾಲ್

ಅಪೇರ ದಿಗ್ವಿಜಯ 8 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದ್ವಾರಕಾ ಜಗದ್ಗುರು ಪುಜ್ಯಶಂಕರಾಶ್ರಮಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಯವರ ಉದಾತ್ತ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಾಣದಯೆ, ತಾತ್ಸಾಹಾರ, ಪಶುವೈದ್ಯ, ಮಾಸಪತ್ರಿಕೆ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣಾ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣೆಗೆ ಬೇಕಾಗುವಷ್ಟನ್ನೂ ಪ್ರೋತ್ಸಾಹಕ ಧನವನ್ನೂ ದಂದಸಾಧ್ಯವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳಿದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ॥ ಪಿ ಎಸ್ ನಾರಾಯಣ್, ಶ್ರೀ ಪಿ.ಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಿಪುರಂ ಪ್ರಜಾಸೌಧದ ಹತ್ತಿರ ಹೊಂಗನೂರು

ಗೋರಕ್ಷಣಾ ಆಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು.

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋವನ್ನೆ ನಮ್ಮ ಪ್ರಾಣದಯಾ ಕಾರ್ಯಗಳು ಹೆಚ್ಚಿ ಬೆಳೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4